# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 229 |
| ಸದಸ್ಯರ ಹೆಸರು: | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 18.08.2026 |
| ಉತ್ತರಿಸಬೇಕಾದ ಸಚಿವರು: | ಕೃಷಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ:</th><th>ಉತ್ತರ</th></tr>
<tr><td>(ಅ)</td><td>ಕಲಬುರಗಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದೀಚೆಗೆ 2023-24 ರಿಂದ 2025-26 ರವರೆಗೆ ಬರ ಅತಿವೃಷ್ಟಿ, ಸಾಲ ಬಾಧೆ ಹಾಗೂ ಬೆಳೆ ನಷ್ಟದಿಂದಾಗಿ ಒಟ್ಟು ಎಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ; (ವರ್ಷಾವಾರು ಸಂಪೂರ್ಣ ವಿವರ ನೀಡುವುದು)</td><td>ಕಲಬುರಗಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದೀಚೆಗೆ 2023-24 ರಿಂದ 2025-26 ರವರೆಗೆ ಒಟ್ಟು 291 ರೈತರು ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು 236 ಪ್ರಕರಣಗಳು ಸಾಲಬಾಧೆಯಿಂದ ಸಂಭವಿಸಿರುತ್ತದೆ
<table>
<tr><th>ವರ್ಷ</th><th>ವರದಿಯಾದ ಪ್ರಕರಣಗಳು</th><th>ಅರ್ಹ ಪ್ರಕರಣಗಳು</th></tr>
<tr><td>2023-24</td><td>88</td><td>68</td></tr>
<tr><td>2024-25</td><td>106</td><td>85</td></tr>
<tr><td>2025-26</td><td>97</td><td>83</td></tr>
<tr><td></td><td>291</td><td>236</td></tr>
</table></td></tr>
<tr><td>(ಆ)</td><td>ಈ ಪೈಕಿ ಸರ್ಕಾರದಿಂದ ಅಧಿಕೃತವಾಗಿ ಅಂಗೀಕರಿಸಲ್ಪಟ್ಟು ಪರಿಹಾರ ಮಂಜೂರಾದ ಪ್ರಕರಣಗಳು ಎಷ್ಟು ತಿರಸ್ಕೃತಗೊಂಡ ಪ್ರಕರಣಗಳು ಎಷ್ಟು;<br>( ಪ್ರಕರಣವಾರು ಕಾರಣಗಳೊಂದಿಗೆ ವಿವರ ನೀಡುವುದು)</td><td>ಸದರಿ ಮೂರು ವರ್ಷಗಳ 291 ಪ್ರಕರಣಗಳಲ್ಲಿ 236 ಅರ್ಹ ಪ್ರಕರಣಗಳಾಗಿದ್ದು, ಪರಿಹಾರಕ್ಕಾಗಿ ಮಂಜೂರಾಗಿರುತ್ತದೆ. ಉಳಿದ 55 ಪ್ರಕರಣಗಳು ತಿರಸ್ಕೃತಗೊಂಡಿದ್ದು, ಪ್ರಕರಣವಾರು ಕಾರಣಗಳೊಂದಿಗೆ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.<br><br>ಕಲಬುರಗಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರೈತರ ಆತ್ಮಹತ್ಯೆಯ ಅರ್ಹ ಪ್ರಕರಣಗಳಿಗೆ ಪರಿಹಾರ ಪಾವತಿಸಲಾಗಿದೆ. ವಿವರಗಳು ಕೆಳಗಿನಂತಿದೆ.
<table>
<tr><th>2023-24</th><th>2024-25</th><th>2025-26(till date)</th></tr>
<tr><td>ಪರಿಹಾರ ಪಾವತಿಸಿರುವ ಸಂಖ್ಯೆ</td><td>ಪರಿಹಾರ ಪಾವತಿಸಿರುವ ಸಂಖ್ಯೆ</td><td>ಪರಿಹಾರ ಪಾವತಿಸಿರುವ ಸಂಖ್ಯೆ</td></tr>
<tr><td>68</td><td>84</td><td>98</td></tr>
</table></td></tr>
<tr><td>(ಇ)</td><td>ಮೃತ ರೈತರ ಕುಟುಂಬಗಳಿಗೆ ಸರ್ಕಾರದಿಂದ ನೀಡಲಾಗುವ ತಲಾ ರೂ. 5 ಲಕ್ಷ ಪರಿಹಾರ ಧನವನ್ನು ಎಲ್ಲಾ ಅರ್ಹ ಕುಟುಂಬಗಳಿಗೆ ಸಂಪೂರ್ಣವಾಗಿ ವಿತರಿಸಲಾಗಿದೆಯೇ;<br>ವಿತರಿಸದಿದ್ದಲ್ಲಿ, ಬಾಕಿ ಇರುವ ಪ್ರಕರಣಗಳೆಷ್ಟು ಮತ್ತು ಇದಕ್ಕೆ ಕಾರಣಗಳೇನು;</td><td>ಕಲಬುರಗಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರೈತರ ಆತ್ಮಹತ್ಯೆಯ ಅರ್ಹ ಪ್ರಕರಣಗಳಿಗೆ ಪರಿಹಾರ ಪಾವತಿಸಲಾಗಿದೆ. ವಿವರ ಕೆಳಗಿನಂತಿದೆ.
<table>
<tr><th>2023-24</th><th>2024-25</th><th>2025-26(till date)</th></tr>
<tr><td>ಪರಿಹಾರ ಪಾವತಿಸಿರುವ ಸಂಖ್ಯೆ</td><td>ಪರಿಹಾರ ಪಾವತಿಸಿರುವ ಸಂಖ್ಯೆ</td><td>ಪರಿಹಾರ ಪಾವತಿಸಿರುವ ಸಂಖ್ಯೆ</td></tr>
<tr><td>68</td><td>84</td><td>98</td></tr>
</table></td></tr>
</table>

| | | |
|---|---|---|
| | | ಕಲಬುರಗಿ ಜಿಲ್ಲೆಯ ಹಿಂದಿನ ಸಾಲಿನ 2023-24ನೇ ಸಾಲಿನಲ್ಲಿ 1 ಹಾಗೂ 2024-25ನೇ ಸಾಲಿನಲ್ಲಿ 1 ಒಟ್ಟು -02 ರೈತ ಆತ್ಮಹತ್ಯೆ ಪ್ರಕರಣಗಳಿಗೆ ಪರಿಹಾರ ಪಾವತಿಸಲು ಅನುಮೋದನೆ ಮತ್ತು ಅನುದಾನ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| ಈ) | ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ (MSP) ಸಿಗದಿರುವುದು ಮತ್ತು ಕೃಷಿ ವೆಚ್ಚ ಹೆಚ್ಚಾಗುತ್ತಿರುವುದು ರೈತರ ಆತ್ಮಹತ್ಯೆಗೆ ಪ್ರಮುಖ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಉಪವಿಭಾಗ ಮಟ್ಟದ ಸಮಿತಿಯಲ್ಲಿ ಆತ್ಮಹತ್ಯೆ ಪ್ರಕರಣಗಳಿಗೆ ಸಂಬಂದಿಸಿದಂತೆ ರೈತರ ಸಾಲ ಬಾಧೆ ವಿವರಗಳನ್ನು ಮಾತ್ರ ಪರಿಶೀಲಿಸಲಾಗುತ್ತದೆ.<br><br>ಮುಂದುವರೆದು, ಕೇಂದ್ರ ಸರ್ಕಾರವು ಪ್ರತಿ ವರ್ಷ 14 ಮುಂಗಾರು ಬೆಳೆಗಳಿಗೆ ಮತ್ತು 6 ಹಿಂಗಾರು ಹಂಗಾಮಿನ ಬೆಳೆಗಳಿಗೆ ಪ್ರತ್ಯೇಕವಾಗಿ ಬೆಂಬಲ ಬೆಲೆಯನ್ನು ಘೋಷಣೆ ಮಾಡುತ್ತದೆ. ಕೇಂದ್ರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು (Commission on Agricultural Costs and Prices (CACP)) ಪ್ರಮುಖ ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳ ರಾಜ್ಯವಾರು ಉತ್ಪಾದನಾ ವೆಚ್ಚದ ಮಾಹಿತಿಯನ್ನು ಕ್ರೋಢೀಕರಿಸಿ, ಅವುಗಳ ಆಧಾರದ ಮೇಲೆ, ಉತ್ಪಾದನಾ ವೆಚ್ಚ (ರೈತ ಭರಿಸಿದ ಎಲ್ಲಾ ವೆಚ್ಚಗಳು ಮತ್ತು ಕುಟುಂಬದ ಶ್ರಮ) ಹಾಗೂ ಉತ್ಪಾದನಾ ವೆಚ್ಚದ ಶೇ.50 ರಷ್ಟು ಸೇರಿಸಿ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. CACP ಶಿಫಾರಸ್ಸನ್ನು ಪರಿಗಣಿಸಿ ಕೇಂದ್ರ ಸರ್ಕಾರವು ಬೆಂಬಲ ಬೆಲೆ ಘೋಷಣೆ ಮಾಡುತ್ತದೆ. ಸಗಟು ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ದರಗಳು ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಮಾರಾಟವಾಗುವ ಸಂದರ್ಭಗಳಲ್ಲಿ, ಕೇಂದ್ರದ ಅನುಮತಿಯೊಂದಿಗೆ ಬೆಂಬಲ ಬೆಲೆಯಲ್ಲಿ ರೈತರಿಂದ ಉತ್ಪನ್ನಗಳನ್ನು ಖರೀದಿಸಲು ಕೃಷಿ ಮಾರಾಟ ಇಲಾಖೆ/ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗಳಿಂದ ಕ್ರಮವಹಿಸಲಾಗುತ್ತದೆ. ಕನಿಷ್ಠ ಬೆಂಬಲ ಬೆಲೆ ಇಲ್ಲದ ತೋಟಗಾರಿಕಾ ಬೆಳೆಗಳಿಗೆ ಬೆಲೆ ಕುಸಿತವಾದ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಅನುಮತಿಯೊಂದಿಗೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ರೈತರಿಂದ ಖರೀದಿಸಲು ಕ್ರಮವಹಿಸಲಾಗುತ್ತದೆ. |
| ಉ) | ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ಮತ್ತು ಸಂಕಷ್ಟದಲ್ಲಿರುವ ಕೃಷಿಕ ಕುಟುಂಬಗಳಿಗೆ ನೆರವಾಗಲು ಸರ್ಕಾರವು ಜಿಲ್ಲೆಯಲ್ಲಿ ಕೈಗೊಂಡಿರುವ ಪ್ರಮುಖ ಮುನ್ನೆಚ್ಚರಿಕಾ ಹಾಗೂ ಪರಿಹಾರ ಕ್ರಮಗಳೇನು? | ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ಮತ್ತು ಸಂಕಷ್ಟದಲ್ಲಿರುವ ಕೃಷಿಕ ಕುಟುಂಬಗಳಿಗೆ ನೆರವಾಗಲು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ |

**ಕಡತ ಸಂಖ್ಯೆ:AGRI/186/AML/2026**

P.M Narendraswamy

**ಪಿ.ಎಂ ನರೇಂದ್ರಸ್ವಾಮಿ.**
(ಕೃಷಿ ಸಚಿವರು)

ಅನುಬಂಧ-1

## ಕಲಬುರಗಿ ಜಿಲ್ಲೆಯ 2023-24 ರಿಂದ 2025-26 ರವರೆಗಿನ ತಿರಸ್ಕೃತ ಪ್ರಕರಣಗಳ ವಿವರ

| ಕ್ರ.ಸಂ | ವರ್ಷ | ರೈತರ ಹೆಸರು | ತಾಲ್ಲೂಕು | ಆತ್ಮಹತ್ಯೆ ದಿನಾಂಕ | ತಿರಸ್ಕೃತವಾಗಿರುವುದಕ್ಕೆ ಕಾರಣಗಳು |
|---|---|---|---|---|---|
| 1 | 2023-24 | ಸಂಗಪ್ಪ ಎರಪ್ಪ | ಚಿಂಚೋಳಿ | 8-Nov-23 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 2 | 2023-24 | ಪ್ರಕಾಶ್ ಮಾರುತಿ | ಚಿಂಚೋಳಿ | 15-Nov-23 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 3 | 2023-24 | ಸುದರ್ಶನ ಜಾರಡ್ಡಿ, ತಂದೆ: ಮಾಣಿಕರಡ್ಡಿ | ಚಿಂಚೋಳಿ | 11-Aug-23 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 4 | 2023-24 | ರಮೇಶ್, ತಂದೆ: ರಾಜಪ್ಪ, ಚಿಂಚೋಳಿ (ಹ) | ಕಲಗಿ | 16-Mar-24 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 5 | 2023-24 | ಸಚಿನ್, ತಂದೆ: ಚಂದ್ರಕಾಂತ | ಕಲಬುರಗಿ | 4-Jun-23 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 6 | 2023-24 | ಚಂದ್ರಕಾಂತ ಜಗನ್ನಾಥ ಕೊಡ್ಡಿ | ಕಲಗಿ | 15-Oct-23 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 7 | 2023-24 | ಸುನಿಲ್ ಗುರುನಾಥ | ಕಲಗಿ | 20-Oct-23 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 8 | 2023-24 | ಬಸವಂತ್ರಾಯ ಭೀಮರಾಯಗೌಡ ಮುಗನೂರು | ಯಡ್ರಾಮಿ | 30-Dec-23 | 6 ತಿಂಗಳಿಗಿಂತ ಹೆಚ್ಚು ಅವಧಿಯಾಗಿರುವ ಕಾರಣ ತಿರಸ್ಕರಿಸಲಾಗಿದೆ. |
| 9 | 2023-24 | ಸಿದ್ದಪ್ಪ ಮಲ್ಲಪ್ಪ ಮುಗನೂರ | ಯಡ್ರಾಮಿ | 5-Aug-23 | 6 ತಿಂಗಳಿಗಿಂತ ಹೆಚ್ಚು ಅವಧಿಯಾಗಿರುವ ಕಾರಣ ತಿರಸ್ಕರಿಸಲಾಗಿದೆ. |
| 10 | 2023-24 | ಗುರುಪ್ಪ ನಿಂಗಪ್ಪ ಸಸಬಾಳ | ಯಡ್ರಾಮಿ | 6-Oct-23 | 6 ತಿಂಗಳಿಗಿಂತ ಹೆಚ್ಚು ಅವಧಿಯಾಗಿರುವ ಕಾರಣ ತಿರಸ್ಕರಿಸಲಾಗಿದೆ. |
| 11 | 2023-24 | ಯಲ್ಲಪ್ಪ, ತಂದೆ: ಲಚಪ್ಪ, ಕೆಂದಗೊಳ್ಳಿ | ಯಡ್ರಾಮಿ | 2-Oct-23 | 6 ತಿಂಗಳಿಗಿಂತ ಹೆಚ್ಚು ಅವಧಿಯಾಗಿರುವ ಕಾರಣ ತಿರಸ್ಕರಿಸಲಾಗಿದೆ. |

| | | | | | |
|---|---|---|---|---|---|
| 12 | 2023-24 | ಪ್ರಭು, ತಂದೆ: ಶಿವಶರಣಪ್ಪ ಮಲ್ಲಪ್ಪ | ಯಡ್ರಾಮಿ | 15-Aug-23 | 6 ತಿಂಗಳಿಗಿಂತ ಹೆಚ್ಚು ಅವಧಿಯಾಗಿರುವ ಕಾರಣ ತಿರಸ್ಕರಿಸಲಾಗಿದೆ. |
| 13 | 2023-24 | ಶರಣಪ್ಪ ನಿಂಗಪ್ಪ ಮಲ್ಲಬಾದ | ಯಡ್ರಾಮಿ | 2-Jun-23 | 6 ತಿಂಗಳಿಗಿಂತ ಹೆಚ್ಚು ಅವಧಿಯಾಗಿರುವ ಕಾರಣ ತಿರಸ್ಕರಿಸಲಾಗಿದೆ. |
| 14 | 2023-24 | ಮಹೇಶ್ ದಸ್ತನ್ಯ ಚಿಂಚೋಳಿ (ಹ) | ಕಲಗಿ | 12-Feb-24 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 15 | 2023-24 | ಗುಂಡಪ್ಪ ಜಾತಪ್ಪ ಹಿಪ್ಪರಗಾ ಎಸ್.ಎನ್. | ಜೇವರ್ಗಿ | 15-Apr-23 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 16 | 2023-24 | ಶಮ್ಮುದ್ದೀನ್ ಶಭುದ್ದೀನ್ ಮಗಾಳಗಿ | ಕಲಗಿ | 28-Mar-24 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 17 | 2023-24 | ಬಾಬುರಾಯ ರೇವಣಸಿದ್ದಪ್ಪ ವಾಲ್ಕಿಂದಿ ಖಾನಾ | ಚಿಂಚೋಳಿ | 6-Aug-23 | 6 ತಿಂಗಳಿಗಿಂತ ಹೆಚ್ಚು ಅವಧಿಯಾಗಿರುವ ಕಾರಣ ತಿರಸ್ಕರಿಸಲಾಗಿದೆ. |
| 18 | 2023-24 | ಸಿದ್ದು ಶರಣಬಸಪ್ಪ ರಾಮಶೆಟ್ಟಿ ವಾಗ್ದರಿ | ಆಲಂದ | 15-Oct-23 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 19 | 2023-24 | ದಿಗಂಬರಗೌಡ ತುಕಾರಾಮ | ಆಲಂದ | 30-Aug-23 | FSL ವರದಿಯಲ್ಲಿ ವಿಷ ಸೇವನೆಯ ಯಾವುದೇ ಉಲ್ಲೇಖವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 20 | 2023-24 | ಭಾಗಣ್ಣ ಭಾಗವಂತರಾಯ | ಜೇವರ್ಗಿ | 11-Nov-23 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 21 | 2024-25 | ಅನಿಲ್ ಕಾಶಿನಾಥ ಗುಲ್ಲಿ | ಆಲಂದ | 23-May-24 | ಮೃತ ವ್ಯಕ್ತಿಯ ಹೆಸರಿನಲ್ಲಿ ಬ್ಯಾಂಕಿನಲ್ಲಿ ಯಾವುದೇ ಸಾಲವಿಲ್ಲ. |
| 22 | 2024-25 | ಹನಮಂತಪ್ಪ ಬೆಲ್ಲಪ್ಪ | ಕಲಗಿ | 25-Apr-24 | ಅತಿಯಾದ ಮದ್ಯಪಾನದ ಅಭ್ಯಾಸದಿಂದ ಮರಣ ಸಂಭವಿಸಿದೆ. |
| 23 | 2024-25 | ಮನ್ನಪ್ಪ ಭೀಮರಾಯ ದೊಡ್ಡಮನಿ | ಜೇವರ್ಗಿ | 30-Apr-24 | ಮೃತ ವ್ಯಕ್ತಿಯ ಹೆಸರಿನಲ್ಲಿ ಬ್ಯಾಂಕಿನಲ್ಲಿ ಯಾವುದೇ ಸಾಲವಿಲ್ಲ. |
| 24 | 2024-25 | ಜಗನ್ನಾಥ ಶಿವಪ್ಪ ಪೂಜಾರಿ | ಚಿಂಚೋಳಿ | 8-Apr-24 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |
| 25 | 2024-25 | ಕಾಶಿಬಾಯಿ ರೇವಣಸಿದ್ದಪ್ಪ | ಕಲಗಿ | 2-Jun-24 | ನಾಮಿನಿದಾರರು ಮೃತ ವ್ಯಕ್ತಿಗೆ ಸಂಬಂಧಪಟ್ಟವರಲ್ಲ (ಪಡಿತರ ಚೀಟಿಯಲ್ಲಿ ಹೆಸರು ಇಲ್ಲ). |
| 26 | 2024-25 | ಹನಮಂತ ರಣೋಬಾ | ಆಲಂದ | 22-Jun-24 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |
| 27 | 2024-25 | ದೇವೇಂದ್ರ ಬಸಲಿಂಗಪ್ಪ | ಯಡ್ರಾಮಿ | 10-Apr-24 | ಮೃತ ವ್ಯಕ್ತಿಯ ಹೆಸರಿನಲ್ಲಿ ಯಾವುದೇ ಸಾಲದ ವಿವರಗಳಿಲ್ಲ. |
| 28 | 2024-25 | ದವಪ್ಪ ಅಯ್ಯಪ್ಪ | ಯಡ್ರಾಮಿ | 22-Apr-24 | 3 ತಿಂಗಳಿಗಿಂತ ಹೆಚ್ಚು ವಿಳಂಬವಾಗಿದೆ. |
| 29 | 2024-25 | ರಾಹುಲ್ ಮಾರೆಪ್ಪ | ಕಲಗಿ | 25-Jun-24 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |

| | | | | | |
|---|---|---|---|---|---|
| 30 | 2024-25 | ಅಂತಮ್ಮ ತಿಪ್ಪಾರೆಡ್ಡಿ | ಸೇಡಂ | 13-Sep-24 | FSL ವರದಿಯಲ್ಲಿ ವಿಷದ ಯಾವುದೇ ಉಲ್ಲೇಖವಿಲ್ಲ. |
| 31 | 2024-25 | ಶಿವಶರಣಪ್ಪ ಕಾಸಪ್ಪ | ಕಲಗಿ | 29-Jun-24 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 32 | 2024-25 | ಮಲಣ್ಣ ಭೀಮರಾಯ ಪೂಜಾರಿ | ಯಡ್ರಾಮಿ | 31-Aug-24 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 33 | 2024-25 | ಅಬ್ದುಲ್ ಗಫೂರ್ ಎಂ.ಡಿ. ಉಮರ್ | ಜೇವರ್ಗಿ | 1-Aug-24 | ಮೃತ ರೈತನ ಹೆಸರಿನಲ್ಲಿ ಬೆಳೆ ಸಾಲವಿಲ್ಲದ ಕಾರಣ ತಿರಸ್ಕರಿಸಲಾಗಿದೆ. |
| 34 | 2024-25 | ಹುಣಚಪ್ಪ ಶಿವರಾಯ | ಶಾಬಾದ | 24-Sep-24 | ಮೃತ ವ್ಯಕ್ತಿಯ ಹೆಸರಿನಲ್ಲಿ ಭೂಮಿ ಮತ್ತು ಸಾಲದ ದಾಖಲೆಗಳಿಲ್ಲ. |
| 35 | 2024-25 | ಲಕ್ಷ್ಮಣ ಆದಿವೇಪ್ಪ ಪೂಜಾರಿ ದೇವಂತಗಿ | ಆಲಂದ | 10-Nov-24 | 3 ತಿಂಗಳಿಗಿಂತ ಹೆಚ್ಚು ಅವಧಿಯಾಗಿದೆ. |
| 36 | 2024-25 | ಅಪ್ಪಾಶಾ ಭೀಮಶಾ ದೇವಂತಗಿ | ಆಲಂದ | 15-Jan-25 | ಮೃತ ವ್ಯಕ್ತಿಯ ಹೆಸರಿನಲ್ಲಿ ಯಾವುದೇ ಸಾಲದ ವಿವರಗಳಿಲ್ಲ. |
| 37 | 2024-25 | ಜಗದೇಶ್ ಬಸವನಯ್ಯ ಕೋರ್ವಾರ್ | ಕಲಗಿ | 18-Aug-24 | ಮೃತ ವ್ಯಕ್ತಿಯ ಹೆಸರಿನಲ್ಲಿ ಸಾಲವಿಲ್ಲದ ಕಾರಣ. |
| 38 | 2024-25 | ಪೂಜಾ ಸುರೇಶ್ ಗುಟ್ಟೇದಾರ್ ಕುಕ್ಕೂರು | ಯಡ್ರಾಮಿ | 24-Sep-24 | RTC ಮತ್ತು ಸಾಲದ ವಿವರಗಳಿಲ್ಲ. |
| 39 | 2024-25 | ಸೂರ್ಯಕಾಂತ ಬಾಬುರಾವ್ ಹೊನ್ನಾಳಿ | ಕಮಲಾಪುರ | 19-Mar-25 | ಅತಿಯಾದ ಮದ್ಯಪಾನದ ಅಭ್ಯಾಸದಿಂದ ಮರಣ ಸಂಭವಿಸಿದೆ. |
| 40 | 2024-25 | ಭೀಮರಾಯ ಪರಮಣ್ಣ ಕುಂಬಾರಹಳ್ಳಿ | ಯಡ್ರಾಮಿ | 21-Mar-25 | ಮೃತ ವ್ಯಕ್ತಿಯ ಹೆಸರಿನಲ್ಲಿ ಭೂಮಿ ಮತ್ತು ಸಾಲದ ದಾಖಲೆಗಳಿಲ್ಲ. |
| 41 | 2024-25 | ಸಿದರಾಮಪ್ಪ ಶಿವಪ್ಪ ಕಟ್ಟಿಮನಿ | ಯಡ್ರಾಮಿ | 30-Mar-25 | ಮೃತ ವ್ಯಕ್ತಿಯ ಹೆಸರಿನಲ್ಲಿ ಭೂಮಿ ಮತ್ತು ಸಾಲದ ದಾಖಲೆಗಳಿಲ್ಲ. |
| 42 | 2025-26 | ಹುಸೇನಸಾಬ್ ಇಸ್ಮಾಯಿಲ್‌ಸಾಬ್ | ಕಲಬುರಗಿ | 16-Jun-25 | ಮೃತ ವ್ಯಕ್ತಿಯ ಹೆಸರಿನಲ್ಲಿ ಭೂಮಿ ಮತ್ತು ಬೆಳೆ ಸಾಲವಿಲ್ಲ. |
| 43 | 2025-26 | ನಾಗಣ್ಣ ಚಂದ್ರಶೆಟ್ಟಿ | ಕಲಗಿ | 6-Aug-25 | ಮೃತ ವ್ಯಕ್ತಿಯ ಹೆಸರಿನಲ್ಲಿ ಭೂಮಿ ಮತ್ತು ಬೆಳೆ ಸಾಲವಿಲ್ಲ. |
| 44 | 2025-26 | ಹನುಮಂತ ಬಸವರಾಜ್ | ಕಲಬುರಗಿ | 20-Aug-25 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |
| 45 | 2025-26 | ಸಿದ್ದಮ್ಮ ಎರಪ್ಪ ಕೊಳ್ಳೂರು | ಕಲಬುರಗಿ | 5-Jul-25 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |
| 46 | 2025-26 | ರವಿ ಸಾಯಿಬಣ್ಣ ಹೊಸಮನಿ | ಜೇವರ್ಗಿ | 1-Nov-25 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |
| 47 | 2025-26 | ಮಂಜುನಾಥ ಬಸವರಾಜ್ | ಕಲಗಿ | 23-May-25 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |
| 48 | 2025-26 | ವಿಶ್ವರಾಧ್ಯ ಫಕೀರಾಯ ಹಿರೇಮಠ | ಜೇವರ್ಗಿ | 19-Oct-25 | ಅಂತಿಮ ವರದಿಯಲ್ಲಿ ಅತಿಯಾದ ಮದ್ಯಪಾನದಿಂದ ಮರಣ ಸಂಭವಿಸಿದೆ ಎಂದು ಉಲ್ಲೇಖಿಸಲಾಗಿದೆ. |

| | | | | | |
|---|---|---|---|---|---|
| 49 | 2025-26 | ಆನಂದ ಸಿದ್ದಪ್ಪ | ಜೇವರ್ಗಿ | 20-Dec-25 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ, ಮತ್ತು ಈಗಾಗಲೇ ಜಮೀನು ಮಾರಾಟ ಮಾಡಲಾಗಿದೆ. |
| 50 | 2025-26 | ಮಾರೆಪ್ಪ ರಾಯಪ್ಪ ಪಟೇದಾರ್ | ಜೇವರ್ಗಿ | 18-Jan-26 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |
| 51 | 2025-26 | ಶ್ರೀಮಂತ ಭೀಮರಾಯ ಪಾಟೀಲ್ | ಜೇವರ್ಗಿ | 18-01-2026 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |
| 52 | 2025-26 | ಮಲ್ಲಕಣ್ಣ ನಿಂಗಣ್ಣ ಹಾರನಾಳ | ಜೇವರ್ಗಿ | 9-Jan-26 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |
| 53 | 2025-26 | ಶಿವಾನಂದ ಸಿದ್ದಗೊಂಡಪ್ಪ | ಯಡ್ರಾಮಿ | 23-Jan-26 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |
| 54 | 2025-26 | ಕೃಷ್ಣ ಸಂಜು ಕುಮಾರ್ ದೇವಿಂದರಪ್ಪ | ಅಫ್ಜಲ್ಪುರ | 4-Dec-25 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |
| 55 | 2025-26 | ತಾರಾಸಿಂಗ್ ವಿಠ್ಠಲ ಜಾಧವ್ | ಕಲಬುರಗಿ | 6-Feb-26 | ಮೃತ ವ್ಯಕ್ತಿಯ ಹೆಸರಿನಲ್ಲಿ ಬೆಳೆ ಸಾಲವಿಲ್ಲ. |

## ಅನುಬಂಧ-2

**ರೈತರ ಅನುಕೂಲಕ್ಕಾಗಿ ಈ ಕೆಳಗಿನ ವಿವಿಧ ಯೋಜನೆ / ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.**

- ಬೀಜಗಳ ಪೂರೈಕೆ: ಬೀಜಗಳ ಪೂರೈಕೆ ಯೋಜನೆಯಡಿ ರಾಜ್ಯದ ಎಲ್ಲಾ ವರ್ಗದ ರೈತರಿಗೆ ವಿವಿಧ ಕೃಷಿ ಬೆಳೆಗಳ ಪ್ರಮಾಣಿತ/ ನಿಜ ಚೀಟಿ ಬಿತ್ತನೆ ಬೀಜಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ. 50 ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75 ರ ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ.

- ಕೃಷಿ ಯಾಂತ್ರೀಕರಣ: ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ ಅನುವು ಮಾಡಿಕೊಡಲು ಹಾಗೂ ಕೂಲಿ ಕಾರ್ಮಿಕರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು, ಕೃಷಿ ಯಾಂತ್ರೀಕರಣ ಯೋಜನೆಯಡಿ ಕೃಷಿ ಯಂತ್ರೋಪಕರಣಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.90 ರಂತೆ ಎಲ್ಲಾ ವರ್ಗದ ರೈತರಿಗೆ ಗರಿಷ್ಠ ರೂ.1.00 ಲಕ್ಷಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ ಹಾಗೂ 45 ಪಿ.ಟಿ.ಒ ಹೆಚ್.ಪಿ ವರೆಗಿನ ಟ್ರಾಕ್ಟರ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ರೂ.0.75 ಲಕ್ಷ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರ ಗರಿಷ್ಠ ರೂ.3.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.

- ಕೃಷಿ ಸಂಸ್ಕರಣೆ: ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕಗಳು, ಟಾರ್ಪಾಲಿನ್ ಮತ್ತು ಸಣ್ಣ ಯಂತ್ರಚಾಲಿತ ಎಣ್ಣೆಗಾಣ ಘಟಕಗಳನ್ನು ಸಹಾಯಧನದಡಿ ರೈತರಿಗೆ ವಿತರಿಸಲಾಗುತ್ತಿದೆ. ಸದರಿ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕಗಳು ಮತ್ತು ಟಾರ್ಪಾಲಿನ್ ಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.50ರಷ್ಟು ಮತ್ತು ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.90ರಷ್ಟು ಸಹಾಯಧನದಡಿ ನೀಡಲಾಗುವುದು. ಸಣ್ಣ ಯಂತ್ರಚಾಲಿತ ಎಣ್ಣೆಗಾಣ ಘಟಕಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.75 ಹಾಗೂ ಪ.ಜಾ./ಪ.ಪಂ., ರೈತರಿಗೆ ಶೇ.90 ರಂತೆ ಎಲ್ಲಾ ವರ್ಗದ ರೈತರಿಗೆ ಗರಿಷ್ಠ ರೂ.1.00 ಲಕ್ಷಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ.

- 'ಸೂಕ್ಷ್ಮ ನೀರಾವರಿ: ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಮಾರ್ಗಸೂಚಿ ಅನ್ವಯ ಸಣ್ಣ / ಅತಿ ಸಣ್ಣ ರೈತರಿಗೆ ಶೇ.55 ಮತ್ತು ಇತರೇ ವರ್ಗದ ರೈತರಿಗೆ ಶೇ.45 ರಷ್ಟು ಸಹಾಯಧನವನ್ನು ಪ್ರತಿಯೊಬ್ಬ ರೈತರಿಗೆ ಗರಿಷ್ಠ 5.0 ಹೆಕ್ಟೇರ್ ಪ್ರದೇಶದವರೆಗೆ ನೀಡಲು ಅವಕಾಶವಿರುತ್ತದೆ. ಇದರಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು 60:40 ಇದ್ದು, ರಾಜ್ಯದಲ್ಲಿ ರಾಜ್ಯ ಸರ್ಕಾರದ ವತಿಯಿಂದ ರಾಜ್ಯದ ಪಾಲಿನ ಹೆಚ್ಚುವರಿ ಸಹಾಯಧನವನ್ನು ಸೇರಿಸಿ, ಎಲ್ಲಾ ವರ್ಗದ ರೈತರಿಗೆ ಸೂಕ್ಷ್ಮ ನೀರಾವರಿ ಘಟಕಗಳ ಅಳವಡಿಕೆಗೆ ಶೇ. 90ರ ಸಹಾಯಧನವನ್ನು ನೀಡಲಾಗುತ್ತಿದೆ.

- ಸಸ್ಯ ಸಂರಕ್ಷಣೆ: ಶೇ.50ರ ರಿಯಾಯಿತಿ ದರದಲ್ಲಿ ಪೀಡೆನಾಶಕ/ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಕಾರಕಗಳ ವಿತರಣೆ ಮಾಡಲಾಗುತ್ತಿದೆ.

- ರೈತ ಸಿರಿ ಕಾರ್ಯಕ್ರಮದಡಿ ರಾಜ್ಯದಲ್ಲಿ ಸಿರಿಧಾನ್ಯಗಳ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಸಿರಿಧಾನ್ಯಗಳಾದ ನವಣೆ, ಹಾರಕ, ಕೊರಲೆ, ಸಾಮೆ, ಊದಲು, ಬರಗು ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10000/-ದಂತೆ ಗರಿಷ್ಠ ಎರಡು ಹೆಕ್ಟೇರ್ ಪ್ರದೇಶದಲ್ಲಿ ಸಿರಿಧಾನ್ಯಗಳನ್ನು ಬೆಳೆದ ಎಲ್ಲಾ ರೈತರುಗಳಿಗೆ ಬೆಳೆ ಸಮೀಕ್ಷೆ ಆಧಾರದಂತೆ ಪ್ರೋತ್ಸಾಹಧನವನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲಾಗುವುದು.

- ಸಾವಯವ ಇಂಗಾಲ ಅಭಿಯಾನ: ರಾಜ್ಯದ ಕೃಷಿ ಭೂಮಿಯಲ್ಲಿ ಸಾವಯವ ಇಂಗಾಲದ ಪ್ರಮಾಣವನ್ನು ಹೆಚ್ಚಿಸಲು, ದ್ವಿದಳಧಾನ್ಯಗಳ ವಿಸ್ತೀರ್ಣ ಮತ್ತು ಉತ್ಪಾದನೆ ಹೆಚ್ಚಿಸುವ ಸಲುವಾಗಿ ಶೇ. 75ರ ರಿಯಾಯಿತಿ ದರದಲ್ಲಿ ಹಸಿರೆಲೆ ಗೊಬ್ಬರ ಬಿತ್ತನೆ ಬೀಜಗಳ ವಿತರಣೆ ಮಾಡಲಾಗುವುದು.

- ಬೆಂಬಲ ಬೆಲೆ: ಕೇಂದ್ರ ಸರ್ಕಾರವು ಪ್ರತಿ ವರ್ಷ ಮುಂಗಾರು ಹಾಗು ಹಿಂಗಾರು ಹಂಗಾಮಿಗೆ ಮುಂಚಿತವಾಗಿ ಬೆಂಬಲ ಬೆಲೆ ಘೋಷಣೆ ಮಾಡುತ್ತಿದ್ದು, ಸಗಟು ಮಾರುಕಟ್ಟೆಯಲ್ಲಿ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಮಾರಾಟವಾಗುವ ಸಂದರ್ಭಗಳಲ್ಲಿ ಬೆಂಬಲ ಬೆಲೆಯಲ್ಲಿ ರೈತರಿಂದ ಉತ್ಪನ್ನಗಳನ್ನು ಖರೀದಿಸಲಾಗುತ್ತಿದೆ. ಅಲ್ಲದೆ, ಅವಶ್ಯಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ ಘೋಷಿಸಿದ ಬೆಂಬಲ ಬೆಲೆಯ ಜೊತೆಗೆ ರಾಜ್ಯ ಸರ್ಕಾರದ ಪ್ರೋತ್ಸಾಹಧನವನ್ನೂ ಸಹ ನೀಡಲಾಗುತ್ತಿದೆ.

- ಹೊಸ ಬೆಳೆ ವಿಮಾ ಯೋಜನೆ: ಈ ಯೋಜನೆಯಡಿ ಪ್ರಕೃತಿ ವಿಕೋಪಗಳು, ಕೀಟಗಳು ಮತ್ತು ರೋಗಗಳಿಂದಾಗಿ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ನೀಡಲಾಗುವುದು. ರೈತರಿಗೆ ನೀಡುವ ವಿಮಾ ಕಂತಿನ ರಿಯಾಯಿತಿಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ನೀಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಅನುವು ಮಾಡಲಾಗುತ್ತಿದೆ.

- ಪಿ.ಎಂ.ಕಿಸಾನ್ ಯೋಜನೆ: ಈ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಎಲ್ಲಾ ಅರ್ಹ ರೈತ ಕುಟುಂಬಗಳಿಗೆ ರೂ.6000 ಗಳನ್ನು 3 ಕಂತುಗಳಲ್ಲಿ ನೇರವಾಗಿ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾಗುತ್ತದೆ.

- ಬೆಳೆ ಪರಿಹಾರ: ಪ್ರಾಕೃತಿಕ ವಿಕೋಪಗಳಿಂದ ಬೆಳೆಹಾನಿ ಸಂಭವಿಸಿದಲ್ಲಿ, ರಾಷ್ಟ್ರ ಹಾಗೂ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ರೈತರಿಗೆ ಪರಿಹಾರ ನೀಡಲಾಗುತ್ತಿದೆ.

➢ ಕೃಷಿ ಆವರ್ತ ನಿಧಿ: ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಬೆಲೆ ಕುಸಿತವಾದಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಆವರ್ತ ನಿಧಿಯನ್ನು ನಿರ್ವಹಿಸಲಾಗುತ್ತಿದೆ.

➢ ರೈತರಿಗೆ ನೇರವಾಗಿ ಸಹಕಾರ ಸಂಘಗಳಿಂದ ಸಾಲದ ನೆರವು: ಸಹಕಾರ ಸಂಘಗಳ ಮೂಲಕ ರೈತರಿಗೆ ಶೂನ್ಯ ಬಡ್ಡಿಯಲ್ಲಿ ಗರಿಷ್ಟ ರೂ. 5.00 ಲಕ್ಷಗಳವರೆಗೆ ಅಲ್ಪಾವಧಿ ಸಾಲ ಮತ್ತು ಶೇ.3ರ ಬಡ್ಡಿಯಲ್ಲಿ ರೂ. 15.00 ಲಕ್ಷಗಳವರೆಗೆ ಮಧ್ಯಮಾವಧಿ ಸಾಲವನ್ನು ನೀಡಲಾಗುತ್ತದೆ.

➢ ಬೆಳೆ ಸಾಲಕ್ಕೆ ಸಹಾಯಧನ : ಈ ಯೋಜನೆಯಡಿ ವಾಣಿಜ್ಯ ಬ್ಯಾಂಕುಗಳು ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ ಅಲ್ಪಾವಧಿ ಸಾಲ ಪಡೆದ ರೈತರಿಗೆ ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ (SLBC) ಮೂಲಕ ಸಾಲದ ಮೊತ್ತ ರೂ.1.00,000/- ಮಿತಿಯೊಳಗಿನ ಬೆಳೆ ಸಾಲ/ಅಲ್ಪಾವಧಿ ಕೃಷಿ ಸಾಲವನ್ನು ಬ್ಯಾಂಕ್ ನಿಗದಿಪಡಿಸಿದ ಅವಧಿಯೊಳಗೆ ಪಾವತಿಸಿದ ರೈತರಿಗೆ ಶೇ.1 ರ ಬಡ್ಡಿ ರಿಯಾಯಿತಿ ನೀಡಲಾಗುವುದು.

➢ ಕೃಷಿ ಭಾಗ್ಯ: ಕೃಷಿ ಭಾಗ್ಯ ಯೋಜನೆಯಡಿ ಕ್ಷೇತ್ರ ಬದು ನಿರ್ಮಾಣ, ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ), ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ, ಹೊಂಡದಿಂದ ನೀರು ಎತ್ತಲು ಡೀಸಲ್/ಪೆಟ್ರೋಲ್/ಸೋಲಾರ್ ಪಂಪ್ ಸೆಟ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.80 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.90 ರ ಸಹಾಯಧನವನ್ನು ಒದಗಿಸಲಾಗುತ್ತಿದೆ ಹಾಗೂ ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕಗಳ ಅಳವಡಿಕೆಗೆ ಶೇ.90 ರ ಸಹಾಯಧನವನ್ನು ಎಲ್ಲಾ ವರ್ಗದ ರೈತರಿಗೆ ನೀಡಲಾಗುತ್ತದೆ. ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ನಿರ್ಮಾಣಕ್ಕೆ ಸಾಮಾನ್ಯ ವರ್ಗದ ರೈತರಿಗೆ ಶೇ.40 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.50 ರ ಸಹಾಯಧನವನ್ನು ಒದಗಿಸಲಾಗುತ್ತಿದೆ.

➢ ಹೈಟೆಕ್ ಹಾರ್ವೆಸ್ಟರ್ ಹಬ್- ಹೈಟೆಕ್ ಹಾರ್ವೆಸ್ಟರ್ ಹಬ್ ಗಳ ಸ್ಥಾಪನೆಗೆ ಶೇ.40 ರಿಂದ ಶೇ.70 ರಷ್ಟು ಸಹಾಯಧನದಲ್ಲಿ ಕೃಷಿ ಯಂತ್ರಧಾರೆ ಕೇಂದ್ರಗಳು, ಇತರೆ ಸಂಘ-ಸಂಸ್ಥೆಗಳು ಹಾಗೂ ವೈಯಕ್ತಿಕ ಫಲಾನುಭವಿಗಳಿಗೆ ಪ್ರತಿ ಘಟಕಕ್ಕೆ ಗರಿಷ್ಟ ರೂ.100.00 ಲಕ್ಷಗಳಿಗೆ ಮೀರದಂತೆ ಅನುದಾನ ನೀಡಲಾಗುತ್ತದೆ.

➢ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಕಾರ್ಯಕ್ರಮದಡಿ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾದ ತೋಟಗಾರಿಕೆ ಹಾಗೂ ಪಶುಸಂಗೋಪನೆಗಳನ್ನು ಒಗ್ಗೂಡಿಸಿ "ಸಮಗ್ರ ಕೃಷಿ ಪದ್ಧತಿ" ಮೂಲಕ ರೈತನ ಆದಾಯ ಹೆಚ್ಚಳ ಮಾಡುವುದು ಹಾಗೂ ಅಳವಡಿಸಿದ ಪ್ರದೇಶದಲ್ಲಿ/ಜಮೀನಿನಲ್ಲಿ ಬೆಳೆ ಉತ್ಪಾದಕತೆ, ಸುಸ್ಥಿರತೆ, ಸಮತೋಲನಾ ಆಹಾರ ಉತ್ಪಾದನೆಗೆ ಕ್ರಮ ಕೈಗೊಳ್ಳಲಾಗಿದೆ.

➢ ರಾಷ್ಟ್ರೀಯ ಆಹಾರ ಸುರಕ್ಷತಾ ಅಭಿಯಾನ ಮತ್ತು ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ-ಎಣ್ಣೆಕಾಳು (NMEO-Oilseeds): ವಿವಿಧ ಆಹಾರ ಬೆಳೆಗಳು, ದ್ವಿದಳ

ಧಾನ್ಯಗಳು, ಹತ್ತಿ, ಕಬ್ಬು ಮತ್ತು ಎಣ್ಣೆ ಕಾಳು ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ ಹಾಗೂ ಕೃಷಿ ಉಪಕರಣಗಳನ್ನು ಶೇ.50ರ ಸಹಾಯಧನದಡಿ ನೀಡಲಾಗುತ್ತದೆ.

- ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಸಾಂತ್ವನ/ಆತ್ಮಸ್ಥೈರ್ಯ ತುಂಬಲು ಹಿರಿಯ ಅಧಿಕಾರಿಗಳೊಂದಿಗೆ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ತಹಶೀಲ್ದಾರ್‌ರವರು ಮತ್ತು ಸಹಾಯಕ ಕೃಷಿ ನಿರ್ದೇಶಕರು ಮನೆಗಳಿಗೆ ಭೇಟಿ ನೀಡುತ್ತಾರೆ. ಅಷ್ಟೇ ಅಲ್ಲದೆ ಸರ್ಕಾರದ ವಿವಿಧ ಸವಲತ್ತುಗಳನ್ನು ಅಂತಹ ಕುಟುಂಬಗಳಿಗೆ ತಲುಪಿಸಲು ಜಿಲ್ಲಾ ಮಟ್ಟದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ಅರ್ಹ ರೈತ ಆತ್ಮಹತ್ಯೆ ಪ್ರಕರಣಗಳಿಗೆ ರೂ.5.00 ಲಕ್ಷ ಪರಿಹಾರ ಧನವನ್ನು ಮೃತ ವ್ಯಕ್ತಿಯ ವಾರಸುದಾರರಿಗೆ ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಇಲಾಖೆಯಿಂದ ನೀಡಲಾಗುತ್ತಿದೆ. ಇಲಾಖೆಯ ಎಲ್ಲಾ ತರಬೇತಿಗಳಲ್ಲಿ ರೈತರಿಗೆ ಆತ್ಮಸ್ಥೈರ್ಯ ತುಂಬುವ ಕುರಿತು ಅರಿವು ಮೂಡಿಸಲಾಗುತ್ತಿದೆ.